

ತೆಗೆದನು. ಕೆಲದಿನ ಜೇನು ಸಾಕುವ, ಕೋಳಿ ಸಾಕುವ ವಿಷಯಗಳನ್ನೂ ಮಾಡಿ ನೋಡಿದ್ದನು. ಇವನು ಸಾಲ ಕೇಳಹೋದರೆ ಇಲ್ಲವೆಂದು ಹೇಳುವ ಎದೆಗಾರಿಕೆ ಯಾರಲ್ಲಿಯೂ ಇರಲಿಲ್ಲ. ಬಣವೆಗಳ ದಹನವು ಎಲ್ಲರಿಗಿಂತ ಅರ್ಧತಾಸು ಮುಂಚಿತವಾಗಿ ರಾಘಪ್ಪನಿಗೆ ಗೊತ್ತಿರುತ್ತಿತ್ತು. ಊರಲ್ಲಿ ಇಲ್ಲದ ನ್ಯಾಯವನ್ನು ಹುಟ್ಟಿಸಿ ಕೋರ್ಟು ಕಚೇರಿ ಎಂದು ಜನರನ್ನು ಎಡತಾಕಿಸಿ, ಒಮ್ಮೆ ಹೊರಗೆ ಬಿದ್ದನೆಂದರೆ ಐದಾರು ರೂಪಾಯಿಗಳಿಲ್ಲದೆ ಅವನು ಮನೆಗೆ ಮರಳುತ್ತಿರಲಿಲ್ಲ. ಇದು ಆ ಕಾಲದ ಐದಾರು ರೂಪಾಯಿ ಎಂಬುದು ನೆನಪಿರಲಿ ಮತ್ತ.

'ನಾಕು ಹೆಜ್ಜೆ ನಡೆದರೆ ನಾಕು ರೂಪಾಯಿ ಕಿಸೆಗೆ ಹಾಕಿಕೊಂಡು ಬರತೇನಿ' ಎಂದು ಅವನು ಹೇಳುವುದು ಅಕ್ಷರಶಃ ನಿಜವಿರುತ್ತಿತ್ತು. ಅವನು ಎಂದಿಗೂ ತನ್ನಅನ್ನಕ್ಕೆ ಕಡಿಮೆ ಮಾಡಿಕೊಳ್ಳಲಿಲ್ಲ. ಎಂದಿಗೂ ಹರಕು ಅರಿವೆ ಉಡಲಿಲ್ಲ, ಮನೆಯ ಮಂದಿಗೂ ಉಡಗೊಡಲಿಲ್ಲ. ಒಮ್ಮೆ ಹಣ ಕಳಕೊಂಡರೆ ಇನ್ನೊಮ್ಮೆ ಇಸ್ಪೀಟು ಆಡಿಯಾಗಲಿ, ಕೋರ್ಟು ಕಚೇರಿಯಲ್ಲಿ ಮಧ್ಯಸ್ಥಿಕೆ ವಹಿಸಿಯಾಗಲಿ, ಮೋಸ ಮಾಡಿಯಾಗಲಿ, ಮನೆಗೆ ಹಣ ತರುವನು...

(ಗಂಗವ್ವ ಗಂಗಾಮಾಯಿ, ಪುಟ 56-61)

ರಾಘೋಬಾ ಭರಾರಿ ಬರೀ ಚಾತುರ್ಯ ಮತ್ತು ಪುಢಾರಿತನಕ್ಕೆ ಮಾತ್ರವಲ್ಲ ರಸಿಕತೆಗೂ ಹೆಸರಾದವನು. ಅವನಿಗೆ ರಸಿಕ ರಾಘಪ್ಪ ಅಥವಾ ರಂಗೇಲಿ ರಾಘಪ್ಪನೆಂಬ ಬಿರುದೂ ಇತ್ತು. ಈ ಮಹಾಶಯನಿಗೆ ಧರ್ಮಪತ್ನಿಯಾದ ಚಂಪಕ್ಕಳ ಜೊತೆಗೆ ಸುಂದರಿಯಾದ ಮೆಹಬೂಬಜಾನ್ ಎಂಬ ಉಪಪತ್ನಿಯಿರುವುದು